ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)

ಸಂ.ಸಾಆ/ಗಣಕ/ವೈವ-571/2014-15(3)

ಆಯುಕ್ತರ ಕಛೇರಿ, ಸಾರಿಗೆ ಮತ್ತು ರಸ್ತೆ ಸುರಕ್ಷತೆ,
1ನೇ ಮಹಡಿ, 'ಎ' ಬ್ಲಾಕ್, ಟಿ.ಟಿ.ಎಂ.ಸಿ. ಕಟ್ಟಡ,
ಕೆ.ಹೆಚ್. ರಸ್ತೆ ಶಾಂತಿನಗರ, ಬೆಂಗಳೂರು-27.
ದಿನಾಂಕ:27-12-2019. ದೂ:080-22214900
ಮಿಂಚಂಚೆ: transcom@nic.in.

## ಸುತ್ತೋಲೆ

ವಿಷಯ : ಸಹಾಯಧನದಡಿ ವಿತರಿಸುವ ವಾಹನಗಳಿಗೆ ಪ್ರತ್ಯೇಕವಾದ TS ಹೊಸ ನೋಂದಣಿ ಶ್ರೇಣಿಯಲ್ಲಿ ನೋಂದಣಿ ಮಾಡಲು ಅನುವಾಗುವಂತೆ ಸಾಫ್ಟ್‌ವೇರ್‌ನಲ್ಲಿ ವ್ಯವಸ್ಥೆ ಕಲ್ಪಿಸಿರುವ ಬಗ್ಗೆ.

ಉಲ್ಲೇಖ : 1) ಈ ಕಛೇರಿಯ ಪತ್ರ ಸಂಖ್ಯೆ:ಸಾಆ/ಪ್ರ-3/ವೈವ-14/19-20, ದಿನಾಂಕ:24-05-2019.
2) ಸರ್ಕಾರದ ಪತ್ರ ಸಂ.ಟಿಡಿ 125 ಟಿಡಿಒ 2019, ದಿ:26-07-2019.
3) ಅಪರ ಸಾರಿಗೆ ಆಯುಕ್ತರು, (ಪ್ರವರ್ತನ) (ದಕ್ಷಿಣ), ಬೆಂಗಳೂರು ರವರ ಆಂತರಿಕ ಕಛೇರಿ ಟಿಪ್ಪಣಿ ಪತ್ರ ಸಂಖ್ಯೆ:ಸಾಆ/ಪ್ರವರ್ತನ-3/ವೈವ-14/19-20, ದಿನಾಂಕ:20-08-2019.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (2)ರ ಸರ್ಕಾರದ ಪತ್ರದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ದಿನಾಂಕ:16-04-2019 ರಂದು ನಡೆದ ಸಭೆಯಲ್ಲಿ ತೀರ್ಮಾನಿಸಿರುವಂತೆ ಹಾಗೂ ಉಲ್ಲೇಖಿತ (1)ರ ಈ ಕಛೇರಿಯ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ವಿವಿಧ ಇಲಾಖೆಗಳ ಮುಖಾಂತರ ಸಹಾಯಧನದಡಿ ವಿತರಿಸುವ ಎಲ್ಲಾ ವರ್ಗದ ವಾಹನಗಳನ್ನು **TS** ಹೊಸ ನೋಂದಣಿ ಶ್ರೇಣಿಯಲ್ಲಿ ನೋಂದಣಿ ಮಾಡಲು ಸರ್ಕಾರವು ಅನುಮತಿ ನೀಡಿರುತ್ತಾರೆ.

ಅದರಂತೆ, ಎನ್.ಐ.ಸಿ.ರವರ ತಾಂತ್ರಿಕ ನೆರವಿನೊಂದಿಗೆ ವಾಹನ್-4 ತಂತ್ರಾಂಶದಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಮುಖಾಂತರ ಸಹಾಯಧನದಡಿ ವಿತರಿಸುವ ಎಲ್ಲಾ ವರ್ಗದ ವಾಹನಗಳನ್ನು **TS** ಹೊಸ ನೋಂದಣಿ ಶ್ರೇಣಿಯಲ್ಲಿ ನೋಂದಣಿ ಮಾಡಲು ಅನುವು ಮಾಡಲಾಗಿದೆ. ಆದ್ದರಿಂದ, ತಮ್ಮ ಕಛೇರಿಯ ವ್ಯಾಪ್ತಿಯಲ್ಲಿ ಸ್ವೀಕರಿಸಲಾಗುವ ವಿವಿಧ ಇಲಾಖೆಗಳ ಮುಖಾಂತರ ಸಹಾಯಧನದಡಿ ವಿತರಿಸುವ ಎಲ್ಲಾ ವರ್ಗದ ವಾಹನಗಳನ್ನು **TS** ಹೊಸ ನೋಂದಣಿ ಶ್ರೇಣಿಯಲ್ಲಿ ನೋಂದಣಿ ಮಾಡಲು ಅಗತ್ಯ ಕ್ರಮವಹಿಸಲು ಈ ಮೂಲಕ ತಿಳಿಸಲಾಗಿದೆ.

03/01

ಆಯುಕ್ತರು, ಸಾರಿಗೆ ಮತ್ತು
ರಸ್ತೆ ಸುರಕ್ಷತೆ, ಬೆಂಗಳೂರು

ಇವರಿಗೆ,

1) ರಾಜ್ಯದ ಎಲ್ಲಾ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ/ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು ಮತ್ತು ಜಂಟಿ ಸಾರಿಗೆ ಆಯುಕ್ತರು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
3) ಅಪರ ಸಾರಿಗೆ ಆಯುಕ್ತರು (ಪರಿಸರ ಮತ್ತು ಇ-ಆಡಳಿತ) ಬೆಂಗಳೂರು ಇವರಿಗೆ ಸದರಿ ಸುತ್ತೋಲೆಯ ಪ್ರತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.